ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಮಾನ್ಯ ಸಚಿವರಾದ ಬಸವಣ್ಣಪ್ಪನವರು ಉತ್ತರವನ್ನು ಕೊಡಲು ಎದ್ದು ನಿಂತಿರುತ್ತಾರೆ. ದಯವಿಟ್ಟು ಅವರ ಉತ್ತರ ಕೇಳಿ.

(ಗೊಂದಲ)

V. ನಾಯಕ ಗುಂಪಿನ ಪರಿಶಿಷ್ಟ ವರ್ಗದವರಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ.

(ಗೊಂದಲದಲ್ಲಿಯೇ ಶ್ರೀ ಡಿ.ಟಿ. ಜಯಕುಮಾರ್‌ರವರು ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಾರೆ)

ಶ್ರೀ ಜಿ. ಬಸವಣ್ಣಪ್ಪ(ಸಮಾಜ ಕಲ್ಯಾಣ ಇಲಾಖಾ ಸಚಿವರು).—ಪರಿಶಿಷ್ಟ ಜಾತಿ ಮಂತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ಕೇಂದ್ರ ಸರ್ಕಾರದ ದಿನಾಂಕ ೨೨-೩-೧೯೭೭ರ ಪತ್ರಾಂಕ ಬಿಸಿ.-೧೨೦೨೦ : ಎಸ್ : ೭೬- ಎಸ್‌ಸಿಟಿ(೧) ಹಾಗೂ ಈ ಬಗ್ಗೆ ಆಗಿಂದ್ಹಾಗ್ಗೆ ಹೊರಡಿಸಲಾದ ಸೂಚನೆಗಳನ್ವಯ ಜಾತಿ ಪ್ರಮಾಣ ಪತ್ರಗಳನ್ನು ಕೊಡಲಾಗುತ್ತಿದೆ. ಈ ಪತ್ರದಲ್ಲಿ ಸಂವಿಧಾನದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆದೇಶ ೧೯೫೦ರ ಅನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಕೊಡಬೇಕಾದ ಜಾತಿ ಪ್ರಮಾಣ ಪತ್ರಗಳ ಫಾರಂನ್ನು ಕೇಂದ್ರ ಸರ್ಕಾರದ ನಿಗದಿ ಪಡಿಸಿದ ಅಂದರೆ ಕೇಂದ್ರ ಸರ್ಕಾರದ ದಿನಾಂಕ ೨೭-೭-೧೯೭೭ರ ನೋಟಿಫಿಕೇಷನ್‌ನಲ್ಲಿ ಸೇರಿರುವ ಪರಿಶಿಷ್ಟ ಜಾತಿ ಮಂತ್ತು ಪರಿಶಿಷ್ಟ ಪಂಗಡಗಳವರಿಗೆ ಮಾತ್ರ ನಿಗದಿಪಡಿಸಿರುವ ಫಾರಂನ್ನು ಉಪಯೋಗಿಸಬಹುದು. ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸಿರುವ ಅಂತಿಮ ನಿರ್ಧಾರ ಕೇಂದ್ರ ಸರ್ಕಾರಕ್ಕೆ ಸೇರಿದ್ದು.

ರಾಜ್ಯ ಸರ್ಕಾರವು ಬೇಡ, ವಾಲ್ಮೀಕಿ, ನಾಯಂಕ್, ನಾಯ್ಕ ಪರಿವಾರ ಮತ್ತು ತಳವಾರ ಜಾತಿಗಳನ್ನು ''ನಾಯಕ'' ಪಂಗಡದ ಪರ್ಯಾಯ ಪದಗಳೆಂದು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಆದರೆ ಈವರೆವಿಗೂ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಪರಿಶಿಷ್ಟ ವರ್ಗದ ನೋಟಿಫಿಕೇಷನ್‌ನ್ನು ತಿದ್ದುಪಡಿಮಾಡಲು ಕ್ರಮ ಕೈಗೊಂಡಿಲ್ಲ. ಹಾಗೂ ಈ ಜಾತಿಗಳು ನಾಯಕ ಪಂಗಡದ ಪರ್ಯಾಯ ಜಾತಿಗಳೆಂದು ಘೋಷಿಸಿಲ್ಲ. ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವವರೆಗೂ ಈ ಜಾತಿಗಳಿಗೆ ಸಂವಿಧಾನದ ಪರಿಶಿಷ್ಟ ವರ್ಗಗಳ ಆದೇಶ ೧೯೫೦ ರನ್ವಯ ಜಾತಿ ಪ್ರಮಾಣ ಪತ್ರಗಳನ್ನು ಕೊಡಲು ಸಾಧ್ಯವಿಲ್ಲ. ಅಂದರೆ ಫಾರಂ ನಂ(೨)ರಲ್ಲಿ ಕೊಡಲು ಸಾಧ್ಯವಿಲ್ಲ. ಆದಾಗ್ಯೂ, ಸರ್ಕಾರ ಈ ಜಾತಿಗಳಿಗೆ ಸೇರಿದವರಿಗೆ ಪರಿಶಿಷ್ಟ ವರ್ಗದವರಿಗೆ ಲಭ್ಯವಿರುವ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸಿರುವುದರಿಂದ ಜಾತಿ ಪ್ರಮಾಣ ಪತ್ರಗಳನ್ನು ಕೊಡಲು ಅಧಿಕಾರ ಹೊಂದಿರುವ ಅಧಿಕಾರಿಗಳಿಗೆ ಈ ಜಾತಿಗಳಿಗೆ ಸೇರಿದವರಿಗೆ ಫಾರಂ ನಂ (೨) ರಲ್ಲಿ ಈವರೆವಿಗೆ ಕೊಡುತ್ತಿದ್ದಂತೆಯೇ ಜಾತಿ ಪ್ರಮಾಣ ಪತ್ರಗಳನ್ನು ಕೊಡಬೇಕೆಂದು ಸೂಚನೆ ಕೊಡಲಾಗಿದೆ. ಶೈಕ್ಷಣಿಕ ಸೌಲಭ್ಯಗಳನ್ನು ಮಂಜೂರು ಮಾಡುವ ಅಧಿಕಾರಿಗಳು ಪರಿಶಿಷ್ಟ ವರ್ಗಕ್ಕೆ ಲಭ್ಯವಿರುವ ಶಿಕ್ಷಣ ಸಂಸ್ಥೆಗಳಲ್ಲಿ ವಿಶಾಲವಾತಿ ಮತ್ತು ಶೈಕ್ಷಣಿಕ ರಿಯಾಯಿತಿಗಳನ್ನು ಮಂಜೂರು ಮಾಡುವರು.

ಎರಡನೇಯದಾಗಿ ದಿನಾಂಕ ೨೩-೧-೧೯೮೬ರ ಸರ್ಕಾರಿ ಆದೇಶವನ್ನು ಉಲ್ಲಂಘಿಸಿರುವ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಸರ್ಕಾರದ ದಿನಾಂಕ ೨೩-೧-೧೯೮೬ರ ಆದೇಶದಲ್ಲಿರುವ ಎಲ್ಲಾ ವಿಷಯಗಳ ಬಗ್ಗೆಯೂ ಏನು ಬದಲಾಯಿಸಿದಂತೆ ಕಾರ್ಯಗತ ಗೊಳಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡಲಾಗಿರುವುದು. ಈ ಆದೇಶವನ್ನು ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ. ಟಿ ಜಯಕುಮಾರ್.—ಸನ್ಮಾನ್ಯ ಅಧ್ಯಕ್ಷರೇ ಇದು ಬಹಳ ಗಂಭೀರವಾದ ವಿಷಯವಾಗಿದೆ. ಏತಕ್ಕೆಂದರೆ ಸರ್ಕಾರದ ಎಲ್ಲಾ ಆದೇಶಗಳನ್ನು ಪಾಲಿಸುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

I would like to quote the following Government order which says as follows :

"Government are pleased to extend the following benefits available to the ST to the persons belonging to Nayaka, Naik, Beda, Valmiki, Parivara, Talavara communities pending decision of the Government of India to treat these communities as synonimous name of Nayaka.

1. Reservation in admission to educational institutions ;

2. Educational concessions ;....."

and further the orders says thus :

"No penal or disciplinary action shall be taken and prosecution if any launched shall be kept in obeyance and shall not be pursued against persons belonging to these communities viz., Naik, Nayaka, Beda, Valmiki, Pariwara, Talavara for having obtained caste certificates as belonging to Nayaka community. Suspension orders if any shall be revoked and persons retrenched if any shall be reinstated..."

ಮಾನ್ಯ ಅಧ್ಯಕ್ಷರೇ ಈಗ ಏನಾಗಿದೆ ಎಂದರೆ ಇದೇ ವಿಚಾರದ ಬಗ್ಗೆ ಕಳೆದ ವಿಧಾನ ಸಭೆಯಲ್ಲಿ ಗವರ್ನರ ಪೀಳಿಗೆಯವರ ಸೂಚನೆಯ ಮುಖಾಂತರ ನಾವು ಕೇಳಿದ್ದೆವು. ಪ್ರಶ್ನೆಯನ್ನು ಕೇಳುವ ಮುಖಾಂತರವೂ ಕೇಳಿದ್ದೆವು. ಇದರಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವಿದೆ. ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ ಎನ್ನುವ ಹಾಗೆ ಸಂವಿಧಾನದ ತೀರ್ಮಾನಕ್ಕೆ ವಿರುದ್ಧವಾಗಿ ನಡೆಯಕ್ಕಂಥ ಅಧಿಕಾರಿಗಳು ಇದ್ದಾರೆ. ಈ ರೀತಿಯಾದರೆ ಸಮಾಜ ಹೇಗೆ ಉದ್ಧಾರವಾಗುತ್ತದೆ. ಮಾನ್ಯ ದಿವಂಗತ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಎಸ್. ಟಿ. ಎಂದು ಸರ್ಟಿಫಿಕೇಟ್‌ನ್ನು ಕೊಡತಕ್ಕಂಥ ಸೌಲಭ್ಯ ಕೆಲವೊಂದು ನಿರ್ದಿಷ್ಟವಾದ ಜನಾಂಗಕ್ಕಿದ್ದು ಆ ಸೌಲಭ್ಯಗಳನ್ನು ತೆಗೆದುಕೊಂಡು ಸರ್ಕಾರದಲ್ಲಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸೌಕರ್ಯಗಳನ್ನು ಪಡೆದಿದ್ದಾರೆ. ಸುಳ್ಳು ಸರ್ಟಿಫಿಕೇಟನ್ನು ಏನೂ ಕೊಟ್ಟಿಲ್ಲ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಕಾರ್ಯದರ್ಶಿಯವರ ಶಿಫಾರಸುಮೇರೆಗೆ ಇವತ್ತು ಆದೇ ಜನಾಂಗಕ್ಕೆ ಸರ್ಟಿಫಿಕೇಟ್ ಕೊಡುವುದಕ್ಕೆ ಬರುತ್ತಿಲ್ಲ. ೧೯೭೩ ರಿಂದ ೧೯೮೧ನೇ ಇಸವಿಯವರೆಗೂ ಮಾನ್ಯ ಗುಂಡೂರಾವ್‌ರವರ ಸರ್ಕಾರ ಇದ್ದಾಗಲೂ ಕೂಡ ಎಸ್. ಟಿ. ಸರ್ಟಿಫಿಕೇಟ್ ಕೊಡತಕ್ಕಂಥದ್ದು ಮುಂದುವರಿದಿತ್ತು. ಅಧಿಕಾರಿಗಳು ಸರ್ಟಿಫಿಕೇಟ್ ಪಡೆದಿರತಕ್ಕಂಥವರನ್ನು ಸಿ.ಆರ್.ಇ, ಮುಖಾಂತರ ಎನ್‌ಕ್ವೈರಿ ಮಾಡಿಸಿ ತೊಂದರೆಗೆ ಒಳಪಡಿಸುತ್ತಿರುವುದಲ್ಲದೆ ಅವರನ್ನು ಕಳ್ಳರು ಎಂದು ಹೇಳುತ್ತಿದ್ದಾರೆ. ಅವರೇನು ಕಳ್ಳತನ ಮಾಡಿ ಸಂಳ್ಳು ಸರ್ಟಿಫಿಕೇಟ್‌ನ್ನು ಪಡೆದಿಲ್ಲ. ಕಾನೂನು ಬದ್ಧವಾಗಿ ಎಸ್.ಟಿ. ಸರ್ಟಿಫಿಕೇಟ್‌ನ್ನು ತೆಗೆದುಕೊಂಡು ಕೆಲಸಕ್ಕೆ ಸೇರಿರುತ್ತಾರೆ. ಸರ್ಕಾರದವರು ಸಚಿವ ಸಂಪುಟದ ತೀರ್ಮಾನದಂತೆ ಕೆಲವಾರು ಸೌಲಭ್ಯಗಳನ್ನು ಕೊಟ್ಟಿದ್ದರೂ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಅಧಿಕಾರಿಗಳು ಸೇರಿಕೊಂಡು ನಾವು ಮಾಡುವುದನ್ನು ಮಾಡುತ್ತೇವೆಂದು ಹೇಳುವುದಾದರೆ ಸರ್ಕಾರಕ್ಕೆ ಗೌರವವಿಲ್ಲವೇ? ಸಚಿವ ಸಂಪುಟಕ್ಕೆ ಗೌರವವಿಲ್ಲವೇ ಎಂದು ನಾನು ಕೇಳಬೇಕಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಸೆಂಟ್ರಲ್ ಗೌವರ್ನಮೆಂಟ್ ಇರಲಿ ಯಾವುದೇ ಸರ್ಕಾರವಾಗಲಿ ಸರ್ಟಿಫಿಕೇಟ್‌ಗೆ ಬೆಲೆ ಕೊಡಬೇಕೆಂದು ಸೂಕ್ತ ಆದೇಶ ನೀಡಬೇಕು. ಸರ್ಟಿಫಿಕೇಟ್‌ಗೆ ಬೆಲೆಯನ್ನು ಕೊಡದಿದ್ದರೆ ಸಚಿವ ಸಂಪುಟಕ್ಕೆ ವಿರುದ್ಧವಾಗಿ ತೀರ್ಮಾನ ತೆಗೆದುಕೊಂಡಂತಾಗುತ್ತದೆ. ಸಚಿವ ಸಂಪುಟ ತೆಗೆದುಕೊಂಡ ತೀರ್ಮಾನಕ್ಕೆ ಬೆಲೆ ಇಲ್ಲದಂತಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಿ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.— ಸಭಾಧ್ಯಕ್ಷರೇ ಸಂವಿಧಾನದ ವಿಧಿಯ ಪ್ರಕಾರ ಪ್ರೈಮರಿ ಸ್ಕೂಲ್ಸ್, ಕ್ಯಾಸ್ಟ್ ಬರುತ್ತದೆ. ಪ್ರಿಮಿಟಿವ್ ಪ್ರಕಾರ ನಾಯಕ ನಾಯಕಡ್ ಪ್ರೈಮರಿ ಸ್ಕೂಲ್ ಟ್ರೈಬ್ಸ್‌ನಲ್ಲಿ ಬರುತ್ತಾರೆ. ಬೇಡ ತಳವಾರ ನಪಕ್ಕಿ ಕರ್ನಾಟಕದ ಲಿಸ್ಟ್ ಪ್ರಕಾರ ಬ್ಯಾಕ್‌ವರ್ಡ್‌ಕ್ಲಾಸ್‌ನಲ್ಲಿ

ಬರಂತ್ತಾರೆ. ಈಗ ಪೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ರಾಷ್ಟ್ರಾಧ್ಯಕ್ಷರೇ ಇಂತಿಂಥವರು ಸೇರಿದ್ದಾರೆ ಎಂದು ಮಾಡಿದ್ದಾರೆ. ಈಗ ನಾಯಂಡ್ ನಾಯಂಡ್ ಎಂದು ಏನೂ ಇದೆ ಈ ಒಂದು ಅನಾವಶ್ಯಕವಾಗಿ ಅನ್ನು ಹೋಗಲಾಡಿಸಬೇಕು. ಇದರಲ್ಲಿರುವ ಈ ಒಂದು ಸಿನಾನಿಮಸ್ ಅನ್ನು ಹೋಗಲಾಡಿಸಬೇಕು. ಇದರ ಬಗ್ಗೆ ರಾಜ್ಯ ಸರ್ಕಾರವು ಬೇಡ ವಾಲ್ಮೀಕಿ ನಾಯ್ಕ, ನಾಯ್ಕ ಪರಿವಾರ ಮತ್ತು ತಳವಾರ ಜಾತಿಗಳನ್ನು 'ನಾಯಕ' ಪಂಗಡದ ಪರ್ಯಾಯ ಪದಗಳಿಂದ ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಇವರನ್ನೆಲ್ಲಾ ಪೆಡ್ಯೂಲ್ ಟ್ರೈಬ್ಸ್‌ಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಆದರೆ ಇದುವರೆವಿಗೂ ಕೇಂದ್ರ ಸರ್ಕಾರದವರು ಈ ಸಿನಾನಿಮಸ್‌ನ್ನು ಇನ್ನೂ ಕ್ಲಾರಿಫೈ ಮಾಡಿಲ್ಲ. ಆದುದರಿಂದ ಅವರಿಗೆ ಫಾರಂ (೧) ಒಂದರ ಪ್ರಕಾರ ಪೆಡ್ಯೂಲ್ಡ್ ಟ್ರೈಬ್ಸ್ ಸರ್ಟಿಫಿಕೇಟ್ ಎಂದು ಕೊಡುವುದಕ್ಕಾಗುವುದಿಲ್ಲ.

ಶ್ರೀ ಆರ್.ಎನ್ ನಾಯಂಕ್.— ಹಿಂದೆ ಇವರಂಗಳೇ ಪೆಡ್ಯೂಲ್ಡ್ ಟ್ರೈಬ್ಸ್ ಎನ್ನುವ ಸರ್ಟಿಫಿಕೇಟ್ ಅನ್ನು ತೆಗೆದುಕೊಂಡು ನೌಕರಿಗೆ ಹೋಗಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.— ತಾವು ಹೇಳಿದಹಾಗೆ ಹಿಂದೆ ಅವರುಗಳು ಫಾರಂ ನಂಬರ್ (೧) ಅನ್ನು ತೆಗೆದುಕೊಂಡು ನೌಕರಿಗೆ ಹೋಗಿದ್ದಾರೆ. ಅವರಿಗೆ ಕೊಟ್ಟಿರತಕ್ಕಂಥ ಸೌಲಭ್ಯಗಳನ್ನು ಇವರು ಉಪಯೋಗಿಸಿಕೊಂಡಿದ್ದಾರೆ. ಅವರ ಮೇಲೆ ಪ್ರಾಸಿಕ್ಯೂಷನ್ ಆರ್ಡರ್ ಕೂಡ ಸರ್ವೆ ಆಗಿದೆ. ಈಗ ನಾವು ಅಧಿಕಾರಿಗಳಿಗೂ ಹೇಳಿದ್ದೇವೆ. ಮತ್ತು ಕೇಂದ್ರ ಸರ್ಕಾರದವರಿಗೆ ರಾಜ್ಯ ಸರ್ಕಾರದವರು ಕ್ಲಾರಿಫೈ ಮಾಡಿಕೊಳ್ಳುವುದಕ್ಕೆ ಬರೆದಿದ್ದೇವೆ. ಅನಾನಿಮಸ್ ಬಗ್ಗೆ ಇದುವರೆಗೂ ಕ್ಲಾರಿಫಿಕೇಷನ್ ಬಂದಿಲ್ಲ. ಆದರ ಬಗ್ಗೆ ಕ್ಲಾರಿಫೈ ಬರುವವರೆಗೆ, ಅದುವರೆಗೆ ನೀವು ಯಾರ ಮೇಲೂ ಕ್ರಮ ತೆಗೆದುಕೊಳ್ಳಕೂಡದು, ಯಾರ ಮೇಲಾದರೂ ಪ್ರಾಸಿಕ್ಯೂಷನ್ ಕೆಲಸ ನಡೆದಿದ್ದರೆ ಅದನ್ನು ನಿಲ್ಲಿಸಿ ಎಂದು ಹೇಳಿದ್ದೇವೆ ಮತ್ತು ಆ ವಂಗಡದವರಿಗೆ ಇನ್ನು ಇತರ ಸೌಲಭ್ಯಗಳು ಎಂದರೆ ಶಿಕ್ಷಣದ ಸೌಲಭ್ಯಗಳು ಅಡ್ಮಿಷನ್ಸ್, ಸ್ಕಾಲರ್‌ಷಿಪ್ಸ್ ಇತ್ಯಾದಿಗಳು ಏನೂ ಇವೆಯೋ ಅವನ್ನು ಕೊಡುವುದರಲ್ಲಿ ಅಭ್ಯಂತರವಿಲ್ಲ ಆ ವರ್ಗಗಳಿಗೆ ಇತರೇ ಸೌಲಭ್ಯಗಳನ್ನು ಕೊಡಬೇಕೆನ್ನುವ ಆದೇಶವನ್ನು ನಾವು ಕೊಟ್ಟಿದ್ದೇವೆ.

ಶ್ರೀ ಡಿ. ಟಿ. ಜಯಕುಮಾರ್.— ಸ್ವಾಮಿ ಅವರೇನಾದರೂ ಮೆಡಿಕಲ್ ಕಾಲೇಜಿಗೆ, ಇಂಜಿನಿಯರಿಂಗ್ ಕಾಲೇಜಿಗೆ ಅಡ್ಮಿಷನ್ ತೆಗೆದುಕೊಳ್ಳಬೇಕಾದರೆ ಅದಕ್ಕಾದರೂ ಸರ್ಟಿಫಿಕೇಟ್ ಕೊಡಬೇಕಲ್ಲವೇ? ಅಧಿಕಾರಿಗಳು ಅವರಿಗೆ ಬಿ.ಟಿ. ಎನ್ನುವ ಸರ್ಟಿಫಿಕೇಟ್‌ನ್ನೂ ಕೊಡುವುದಿಲ್ಲ. ಪೆಡ್ಯೂಲ್ಡ್ ಟ್ರೈಬ್ಸ್ ಎನ್ನುವ ಸರ್ಟಿಫಿಕೇಟಿನ್ನೂ ಕೊಡುವುದಿಲ್ಲ.

ಶ್ರೀ ಜಿ. ಬಸವಣ್ಣೆಪ್ಪ.— ಅವರಿಗೆ ಫಾರಂ ನಂಬರ್ (೨) ರಲ್ಲಿ ಈವರೆವಿಗೂ ಕೊಡುತ್ತಿದ್ದಂತೆಯೇ ಜಾತಿ ಪ್ರಮಾಣ ಪತ್ರಗಳನ್ನು ಕೊಡಬೇಕೆಂದು ಸೂಚನೆ ಕೊಡಲಾಗಿದೆ. ಆದರೆ ಫಾರಂ ನಂಬರ್ (೧) ಅನ್ನು ಕೊಡುವುದಕ್ಕಾಗುವುದಿಲ್ಲ. ಇದರಲ್ಲಿ ಬಿ. ಟಿ. ಪಂಗಡದವರಿಗೆ ೫ ಪರ್ಸೆಂಟ್ ರಿಸರ್ವೇಷನ್ ಇದೆ, ಪೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ೩ ಪರ್ಸೆಂಟ್ ರಿಸರ್ವೇಷನ್ ಇದೆ. ಜೇನು ಕುರುಬರು, ಕಾಡು ಕುರುಬರು ಎಂದು ಇದ್ದಾರೆ. ಅವರನ್ನು ಎಸ್.ಟಿ ಗೆ ಸೇರಿಸಿದ್ದಾರೆ. ಅದನ್ನು ನೋಡಿಕೊಂಡು ಬೇರೆ ಜಿಲ್ಲೆಯಲ್ಲಿರುವ ಇತರೇ ಕುರುಬರೂ ಸಹ ನಮ್ಮನ್ನೂ ಕೂಡ ಎಸ್.ಟಿ.ಗೆ ಸೇರಿಸಿ ಎಂದು ಕೇಳುತ್ತಿದ್ದಾರೆ. ಹಾಗೆ ಮಾಡುವುದಕ್ಕಾಗುತ್ತದೆಯೇ? ಹಾಗೆ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಯಾರು ಯಾರನ್ನು ಸೇರಿಸಿದ್ದಾರೋ ಅದರಂತೆ ನಾವು ಹೋಗಬೇಕು. ಈ ಎಸ್.ಟಿ. ಗಿಂತ ಬಿ.ಟಿ. ನಲ್ಲೇ ಜಾಸ್ತಿ ರಿಸರ್ವೇಷನ್ ಇರುವುದರಿಂದ ಅವರಿಗೆ ಬಿ.ಟಿ. ಸರ್ಟಿಫಿಕೇಟ್ ಸಿಕ್ಕಿದರೆ ಅವರಿಗೆ ಇನ್ನೂ ಹೆಚ್ಚಿನ ಲಾಭ ಬರುತ್ತದೆ. ಈ ಎಸ್.ಟಿ. ಸರ್ಟಿಫಿಕೇಟ್‌ನಿಂದ ಅಷ್ಟು ಲಾಭ ಇಲ್ಲ. ನಾನು ಮೊದಲೇ ಹೇಳಿದ ಹಾಗೆ ಅವರಿಗೆ ಫಾರಂ ನಂಬರ್ ಒಂದನ್ನು ಕೊಡುವುದಕ್ಕಾಗುವುದಿಲ್ಲ. ಫಾರಂ ನಂಬರ್ (೨) ಬಿ.ಟಿ. ಸರ್ಟಿಫಿಕೇಟ್ ಕೊಡಬೇಕೆಂದು ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ.

ಶ್ರೀ ಎಂ. ಎಲ್. ಮಂತ್ತಣ್ಣನವರ್.— ಮಾನ್ಯ ಮಂತ್ರಿಗಳು ಅವರಿಗೆ ಫಾರಂ ನಂಬರ್ (೧) ಕೊಡುವುದಕ್ಕಾಗುವುದಿಲ್ಲ, ಫಾರಂ ನಂಬರ್ (೨) ಬಿ.ಟಿ. ಸರ್ಟಿಫಿಕೇಟ್ ಅನ್ನು ಕೊಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು. ಈ ಬಗ್ಗೆ ಸರ್ಕ್ಯೂಲರ್ ಏನಾದರೂ ಇದ್ದರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ಸರ್ಕ್ಯೂಲರ್ ಎಲ್ಲಾ ಅಧಿಕಾರಿಗಳಿಗೂ ಹೋಗಿದೆಯೇ?

ಶ್ರೀ ಜಿ. ಬಸವಣ್ಣಪ್ಪ.— ಇದರ ಬಗ್ಗೆ ಈಗಾಗಲೇ ಸರ್ಕ್ಯುಲರ್ ಕೊಟ್ಟಿದ್ದೇನೆ, ಅದು ಎಲ್ಲಾ ಅಧಿಕಾರಿಗಳಿಗೂ ಹೋಗಿದೆ.

ಶ್ರೀ ಎಂ. ಎಲ್. ಮುತ್ತಣ್ಣನವರ್.— ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ ರೀತಿ ಈ ನಾಯಕ ಎನ್ನುವ ಪಂಗಡದವರಿಗೆ ಫಾರಂ. (೧) ಸರ್ಟಿಫಿಕೇಟ್ ಕೊಡುತ್ತಿದ್ದರು. ಹಿಂದೆ ಹಾಗೆ ಕೊಡುವುದಕ್ಕೆ ಸರ್ಕಾರದ ಆದೇಶವೂ ಇತ್ತು. ಅದು ತಪ್ಪು ಆದುದರಿಂದ ಈಗ ಅವರಿಗೆ ಫಾರಂ (೧) ಕೊಡುವುದಕ್ಕಾಗುವುದಿಲ್ಲ, ಫಾರಂ (೨) ಬಿ.ಟಿ. ಸರ್ಟಿಫಿಕೇಟ್ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದರು: ಹಿಂದೆ ಈ ನಾಯಕ ಎನ್ನುವ ಪಂಗಡದವರಿಗೆ ಫಾರಂ (೧) ಏನು ಕೊಟ್ಟಿದ್ದರು ಅದನ್ನು ಅಲ್ಲ ಗೆಳೆಯುವುದಾದರೆ ಅವರನ್ನೇನಾದರೂ ಸಸ್ಪೆಂಡ್ ಮಾಡಬೇಕು ಎಂದು ಏನಾದರೂ ನಿರ್ಣಯ ತೆಗೆದುಕೊಂಡಿದ್ದೀರಾ? ಈಗ ಇವರು ಎಸ್.ಟಿ.ಯಲ್ಲಿ ಅಲ್ಲ, ಬಿ.ಟಿ. ಯಲ್ಲೂ ಅಲ್ಲ. ಅವರನ್ನು ಎಲ್ಲಾ ಲಿಸ್ಟ್‌ನಿಂದಲೂ ತೆಗೆದು ಹಾಕಿದ್ದೀರಿ. ಇದಕ್ಕೇನಾದರೂ ಒಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಹಿಂದೆ ಅವರಿಗೆ ಎಸ್ ಟಿ ಸರ್ಟಿಫಿಕೇಟ್ ಅನ್ನು ಕೊಡುತ್ತಾ ಬಂದದ್ದು ನಿಜ. ಆದರೂ ನಾವು ಇದರ ಬಗ್ಗೆ ಪದೇ ಪದೇ ಕೇಂದ್ರ ಸರ್ಕಾರಕ್ಕೆ ಬರೆದವು. ಈ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಈ ಸಿನಾನಿಮಸ್‌ಗೆ ಕ್ಲಾರಿಫಿಕೇಷನ್ ಕೇಳಿದ್ದೆವು. ಅನಂತರ ಈ ಬಗ್ಗೆ ಏರಿಯಾ ರಿಸ್ಟ್ರಕ್ಷನ್ ರಿಮೂವಲ್ ಬಿಲ್ ೧೯೭೬ರಲ್ಲಿ ಬಂತು. ಈ ಬಗ್ಗೆ ರಾಷ್ಟ್ರಾಧ್ಯಕ್ಷರ ಆಜ್ಞೆಯೂ ಆಗಿದೆ. ಆ ಬಿಲ್ ಪಾಸ್ ಕೂಡ ಆಗಿದೆ. ಆದರೆ ಹಳೇ ಮೈಸೂರಿನ ಭಾಗದಲ್ಲಿ ನಾನು ಮೊದಲೇ ಹೇಳಿದ ಹಾಗೆ ಈ 'ನಾಯಕ' ಎನ್ನುವ ಪರ್ಯಾಯ ಪದಗಳಿಗೆ ಬೇಡ ವಾಲ್ಮೀಕಿ, ನಾಯಕ, ನಾಯ್ಕ ಪರಿವಾರ ಮತ್ತು ತಳವಾರ ಎಂದು ಏನು ಇಲ್ಲವೋ ಅವರುಗಳೂ ಕೂಡ ಈ ಪೆಡ್ಯೂಲ್ಡ್ ಟ್ರೈಬ್ಸ್‌ನ ಸೌಲಭ್ಯಗಳನ್ನು ಕೊಡಬೇಕು ಎಂದು ಕೇಳಿದರು. ಇವೆಲ್ಲಾ ಒಂದೇ ಜಾತಿ ಇದರಲ್ಲಿರುವ ಅನಾಮಲೀಸ್ ಅನ್ನು ಕಾರ್ರಿಫೈ ಮಾಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಅವರಿಂದ ಇದರ ಬಗ್ಗೆ ಕಾರ್ರಿಫಿಕೇಷನ್ ಬರುವವರೆಗೂ ಅವರಿಗೆ ಫಾರಂ (೧) ಕೊಡುವುದಕ್ಕೆ ಬರುವುದಿಲ್ಲ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ ಅವರಿಂದ ನಮಗೆ ಇದರ ಬಗ್ಗೆ ಕಾರ್ರಿಫಿಕೇಷನ್ ಬರುವವರೆಗೂ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಟಿ. ಜಯಕುಮಾರ್.—ಇದರಲ್ಲಿ ಬರೀ ಸ್ಪೆಲಿಂಗ್ ಮಾತ್ರ ವ್ಯತ್ಯಾಸ ಇದೆ, ಇದನ್ನು ತಿಳಿದುಕೊಂಡು ಅವರಿಗೆ ಎಸ್ ಟಿ ಸರ್ಟಿಫಿಕೇಟ್ ಕೊಡುವುದಕ್ಕೆ ಬರುವುದಿಲ್ಲವೇ ?

ಶ್ರೀ ಜಿ. ಬಸವಣ್ಣಪ್ಪ.—ಹಾಗೆ ಕೊಡುವುದಕ್ಕೆ ಬರುವುದಿಲ್ಲ. ಪ್ರುಸೆಡೆನ್ಸ್‌ಯಲ್ ಆರ್ಡರ್ ಪ್ರಕಾರ ಏನು ಸ್ಪೆಲಿಂಗ್ ಬರುತ್ತದೆ. ಆ ಪ್ರಕಾರ ಇದ್ದರೆ ಮಾತ್ರ ಕೊಡುವುದಕ್ಕೆ ಬರುವುದಿಲ್ಲ. ಈ ಸ್ಪೆಲಿಂಗ್‌ನಲ್ಲಿ ಪೆಕ್ಯೂಲಿಯರ್ ಸಿಚುಯೇಷನ್ ಡೆವಲಪ್ ಆಗಿದೆ, ಇನ್ನಾವುದೇ ಸ್ಪೆಲಿಂಗ್ ಎಸ್ ಟಿ ಎಂದು ಕೊಡುವುದಕ್ಕೆ ಬರುವುದಿಲ್ಲ, ಆದಕ್ಕೇನು ಮಾಡುವುದಕ್ಕಾಗುತ್ತದೆ.

ಶ್ರೀ ಎಂ. ಎಲ್. ಮುತ್ತಣ್ಣನವರ್.—ಈಗಲೂ ಕೊಡುತ್ತಾ ಇದ್ದೀರಿ, ನಾನು ತಿಳಿದುಕೊಂಡೇ ಹೇಳುತ್ತಾ ಇದ್ದೇನೆ,

ಶ್ರೀ ಜಿ. ಬಸವಣ್ಣಪ್ಪ.—ಹಾಗೆ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಮಂತ್ರಿಗಳು ಬಹಳ ಸುಲುಭವಾಗಿ ಉತ್ತರ ಹೇಳಿದರು. ನಾನು ಹೇಳುತ್ತೇನೆ ಮಾನ್ಯ ಮಂತ್ರಿಗಳ ಕೈಯಲ್ಲಿ ಇಂಗ್ಲೀಷ್‌ನಲ್ಲಿರುವ Naik, Nayak ಎನ್ನುವ ಪದಗಳನ್ನು ಯಾವರೀತಿ ಕನ್ನಡದಲ್ಲಿ ಬರೆಯುತ್ತಾರೆ ಎನ್ನುವುದನ್ನು ಬರೆಸಿದರೆ ಆಗ ಇದರಲ್ಲಿ ವ್ಯತ್ಯಾಸ ಏನು ಇದೆ ಎನ್ನುವುದು ಗೊತ್ತಾಗುತ್ತದೆ. ಸ್ವಾಮಿ, ಅಳಿಯ ಎನ್ನುವುದು ಬಂದೇ ಜಾತಿ ಇದ್ದಾರೆ ಸರಿ. ಈಗ ಒಂದು ಉದಾಹರಣೆ ಹೇಳುವುದಾದರೆ ಚಿತ್ರದುರ್ಗದಲ್ಲಿರುವ ನಾಯಕರೇ ಬೇರೆ, ಮೈಸೂರು ಜಿಲ್ಲೆಯಲ್ಲಿರುವ ನಾಯಕರೇ ಬೇರೆ, ಇವರ ಪ್ರಕಾರ. ಆದರೆ ಈ ನಾಯಕ ಎನ್ನುವ ಪಂಗಡದಲ್ಲಿ ಬೇರೆ ಬೇರೆ ಜಾತಿ ಇದ್ದರೂ ಕೂಡ ಒಂದು ಕಡೆ ಹೆಣ್ಣು ತರುತ್ತಾರೆ ಇನ್ನೊಂದು ಕಡೆ ಹೆಣ್ಣು ತರುವುದಿಲ್ಲ ಒಂದು ಕಡೆ ಹೆಣ್ಣು ಕೊಡುವುದು ಇರುತ್ತದೆ, ಇನ್ನೊಂದು ಹೆಣ್ಣು ತರುವುದು ಒಂದಿರುತ್ತದೆ. ಇದರಿಂದ ಒಂದೊಂದು ಬೇರೆ ಬೇರೆ ಜಾತಿ ಇರುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಈ ನಾಯಕ ಎನ್ನುವ ಕಮ್ಯೂನಿಟಿಯಲ್ಲಿ ಏನು ಸಿನಾನಿಮ್ಸ್ ಇದೆ; ಅವೆಲ್ಲಾ ಒಂದೇ ಜಾತಿ ಎಂದು

ಪರಿಗಣಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಕಾರ್ಪೊರೇಷನ್ ಮಾಡಿ ಸರ್ಕಾರ ಒಂದು ತೀರ್ಮಾನ ತೆಗೆದು ಕೊಂಡರೆ ಇವೆಲ್ಲಾ ತೊಂದರೆ ತಪ್ಪುತ್ತದೆ. ಹಾಗೆ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಮಂತ್ರಿ ಕೇಂದ್ರ ಸರ್ಕಾರಕ್ಕೆ ಬರೆಯುತ್ತೇನೆಂದು ಹೇಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ತಾವು ಸ್ಪೆಲಿಂಗ್ ಮೇಲೆ ತೀರ್ಮಾನ ಮಾಡುವುದಾದರೆ ಬಡಳ ತೊಂದರೆಯಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ನಾನು ಮಂತ್ರಿ ಅದನ್ನೇ ಹೇಳಬೇಕಾಗುತ್ತದೆ. ಈ ವಿಚಾರ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ನಾವು ಈಗಾಗಲೇ ಈ ಸಿನಾನಿಮಸ್ ಬಗ್ಗೆ ಬರೆದಿದ್ದೇವೆ. ಇನ್ನೊಂದು ಕಾಗದ ಬರೆಯುತ್ತೇನೆ. ತಮಗೆ ಇದರ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ ಎಂದು ಹೇಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್. —ಈ ಬಗ್ಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಬರುವ ತನಕ ಸಿ ಆರ್ ಎಸ್ ಸೆಲ್‌ಗೆ ಏನು ಒಪ್ಪಿಸಿದ್ದೀರಿ ಅದನ್ನು ಅಲ್ಲಿಯವರೆಗೆ, ಯಾರಿಗೂ ಏನೂ ತೊಂದರೆಯಾಗದಂತೆ ನೋಡಿಕೊಳ್ಳುವ ಹಾಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ನಾನು ಮೊದಲೇ ಹೇಳಿದ ಹಾಗೆ ಈ ಸಿನಾನಿಮಸ್ ಬಗ್ಗೆ ಕಾರ್ಪೊಫೈ ಮಾಡುವುದಕ್ಕೆ ಈಗಾಗಲೇ ಕಾಗದ ಬರೆದಿದ್ದೇವೆ. ಮತ್ತು ಈಗ ಇವರಿಗೆ ೩ ಪರ್ಸೆಂಟ್ ರಿಸರ್ವೇಷನ್ ಏನು ಇದೆ ಇದನ್ನೂ ಜಾಸ್ತಿ ಮಾಡಬೇಕೆಂತಲೂ ಕೂಡ ಬರೆದಿದ್ದೇವೆ. ಮಂತ್ರಿಮೈಯೂ ಸಹ ಕಾಗದ ಬರೆಯುತ್ತೇವೆ. ಮತ್ತು ನಾನು ಡೆಲ್ಲಿಗೆ ಹೋದಾಗ ಅವರನ್ನು ಕಂಡು ಈ ಬಗ್ಗೆ ವಿಚಾರವಿನಿಮಯ ನಡೆಸುತ್ತೇನೆ, ನಾನು ಈಗ ಮತ್ತೊಮ್ಮೆ ಕಾಗದ ಬರೆಯುತ್ತೇನೆ.

ನಿಯಮ ೩೩೪ರ ಮೇರೆಗೆ

(೧) ಜಮಖಂಡಿ ತಾಲ್ಲೂಕಿನ ರಬಕವಿ–ಬನಹಟ್ಟಿ, ತೇರದಾಳ ನಗರಗಳ ಮಧ್ಯೆ ಸಾರಿಗೆ ಬಸ್ಸುಗಳನ್ನು ಓಡಿಸುವುದು

ಶ್ರೀ ಎಂ ಎಸ್. ಪಾಟೀಲ್.—(ಗೈರು ಹಾಜರಿ ಆಗಿದ್ದಾರೆ)

ಶ್ರೀ ಜೆ. ಎಸ್. ಬಾಲಕೋಟೆ(ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕಿನ ರಬಕವಿ—ಬನಹಟ್ಟಿ, ತೇರದಾಳ, ಮತ್ತು ಹೋಳ ತಾಲ್ಲೂಕಿನ ಮಹಲಿಂಗಪುರ ಔದ್ಯಮಿಕ ನಗರಗಳು, ಆದ್ದರಿಂದ ದಿನಾಲು ಸಾವಿರಾರು ಜನರು ಈ ಗ್ರಾಮಗಳ ಮಧ್ಯೆ ಪ್ರಯಾಸ ಮಾಡುತ್ತಾರೆ. ಈ ಅಯಲ್ಲೀ ಕಡೆ ಇಲ್ಲಿ ಓಡಾಡುತ್ತಿದ್ದ ಖಾಸಗೀ ವಾಹನಗಳು ಸರಕಾರ ಕಾನೂನು ಕ್ರಮ ತೆಗೆದುಕೊಂಡಿದ್ದರಿಂದ ಬಂದಾಗಿವೆ.

ಇದರಿಂದಾಗಿ ಈ ಭಾಗದ ಜನರಿಗೆ ಪ್ರಯಾಸ ಮಾಡಲು ತುಂಬ ತೊಂದರೆ ಆಗಿದೆ. ಆದ್ದರಿಂದ ಈ ತೊಂದರೆಯನ್ನು ಹೋಗಲಾಡಿಸಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಈ ಭಾಗದಲ್ಲಿ ವಿನಿ ಬಸ್ಸುಗಳನ್ನಾಗಲೀ, ಸಿಟಿ ಬಸ್ಸುಗಳನ್ನಾಗಲೀ ಪ್ರಾರಂಭಿಸಿ ಈ ಭಾಗದ ಜನರ ತೊಂದರೆಯನ್ನು ನಿವಾರಿಸುವುದು ತೀರಾ ಅವಶ್ಯವಾಗಿದೆ.

ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಹೆಚ್ಚಿನ ಬಸ್ಸುಗಳನ್ನು ಈ ಭಾಗದಲ್ಲಿ ಪ್ರಾರಂಭಿಸಲು ಕುರಿತು ಸನ್ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.